ಇ) ಒಂದು

ಈ) ಪ್ರಶ್ನೆ (ಅ)ಕ್ಕೆ ನೀಡಿದ ಉತ್ತರವೇ ಅನ್ವಯಿಸುತ್ತದೆ

515(569) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಾಬಾದ್) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೀದರ್ ಜಿಲ್ಲೆಯ ಕಾರಂಜಾ ಯೋಜನೆಯ ಕಾಮಗಾರಿ ಕೆಲಸ ಯಾವಾಗ ಪ್ರಾರಂಭವಾಯಿತು ಹಾಗೂ ಇದುವರೆವಿಗೂ ಇದಕ್ಕೆ ತಗಲಿರುವ ವೆಚ್ಚ ಎಷ್ಟು,

ಆ) ಕಾರಂಜಾ ಯೋಜನೆಯ ಕಾಮಗಾರಿ ಕೆಲವು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದೆಂದು ಆಶ್ವಾಸನೆ ನೀಡಲಾಗಿದೆಯೇ,

ಇ) ನೀಡಿದಲ್ಲಿ, ಕಾಮಗಾರಿ ಕೆಲಸ ಯಾವಾಗ ಪೂರ್ಣಗೊಳಿಸಲಾಗುವುದು,

ಈ) ಬೀದರ್ ಜಿಲ್ಲೆ ಬೀದರ್ ತಾಲ್ಲೂಕಿನ ಸಂಗೊಳಗಿಯಿಂದ ಪಾತರಪಳ್ಳಿ ಏತ ನೀರಾವರಿ ಕೆಲಸ ಕಾರ್ಯವು ಸ್ಥಗಿತಗೊಳಿಸಲಾಗಿದೆಯೆ, ಕಾಮಗಾರಿ ಸ್ಥಗಿತಗೊಂಡಿದ್ದರೆ ಕಾರಣಗಳೇನು,

ಉ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು ಹಾಗು ಇದಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು)

ಅ) ಕಾರಂಜಾ ಯೋಜನೆಯ ಕಾಮಗಾರಿ ಕೆಲಸ 1970–71ರಲ್ಲಿ ಪ್ರಾರಂಭವಾಗಿದ್ದು ಡಿಸೆಂಬರ್ 2006ರ ವರೆಗೆ ರೂ 450 00 ಕೋಟಿ ರೂ ಗಳು ವೆಚ್ಚವಾಗಿರುತ್ತದೆ

ಆ) ಕಾರಂಜಾ ಯೋಜನೆಯ ಕಾಮಗಾರಿಗಳನ್ನು ಮಾರ್ಚ್ 2007ರ ಅವಧಿಗೆ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ

ಇ) ಕಾರಂಜಾ ಯೋಜನೆಯ ಅಣೆಕಟ್ಟು ಮತ್ತು 31 ಕಿ ಮೀ ಉದ್ದದ ಎಡದಂಡೆ ಕಾಲುವೆಯ ಹಾಗೂ ಅದರ 8 6 ಕಿ ಮೀ ತುದಿ ವಿತರಣಾ ಕಾಲುವೆ ಪೂರ್ಣಗೊಂಡಿರುತ್ತವೆ 131 ಕಿ ಮೀ ಉದ್ದದ ಬಲದಂಡೆ ಕಾಲುವೆಯಲ್ಲಿ 124ರ ಕಿ ಮೀ ಗಳು ಪೂರ್ಣಗೊಂಡಿದ್ದು, ಉಳಿದ 7 ಕಿ ಮೀ ಕಾಮಗಾರಿಗಳನ್ನು

ಮಾರ್ಚ್ 2007ರ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಕಾರಂಜಾ ಮೇಲ್ಭಾಗದ ಏತ ನೀರಾವರಿಯ 21 ಕಿ ಮೀ ಉದ್ದದ ಕಾಲುವೆಯು 19 ಕಿ ಮೀ ಗಳು ಪೂರ್ಣಗೊಂಡಿದ್ದು, ಉಳಿದ 2 ಕಿ ಮೀ ಕಾಮಗಾರಿಯನ್ನು ಮಾರ್ಚ್ 2007ರ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಮೇಲೆ ಸೂಚಿಸಿದ ಬಾಕಿ ಕಾಮಗಾರಿಗಳನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ

ಈ) ಮತ್ತು ಉ) ಬೀದರ್ ಜಿಲ್ಲೆ ಮತ್ತು ಬೀದರ್ ತಾಲ್ಲೂಕಿನ ಸಂಗೊಳಗಿ ಪಾತರಪಳ್ಳಿ ಏತ ನೀರಾವರಿ ಯೋಜನೆಗೆ ವಾಸ್ತವವಾಗಿ ಕಾರಂಜಾ ಮೇಲ್ಭಾಗ ಏತ ನೀರಾವರಿ ಯೋಜನೆ ಹೆಸರಿಸಲಾಗಿದ್ದು, ಸದರಿ ಕಾಮಗಾರಿಗೆ ಇನ್‌ಟೇಕ್ ಚಾನಲ್, ಜಾಕ್‌ವೆಲ್, ರೈಸಿಂಗ್‌ಮೇನ್ ಮತ್ತು 19ರ ಕಾಲುವೆ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ 2 ಕಿ ಮೀ ಗಳ ಕಾಲುವೆ ಕಾಮಗಾರಿಗಳನ್ನು ಮಾರ್ಚ್ 2007ರಲ್ಲಿ ಪೂರ್ಣಗೊಳಿಸುವ ಕಾರ್ಯಕ್ರಮವಿದೆ

516(869) ಶ್ರೀ ಮೀರಾಜುದ್ದೀನ್ ಪಟೇಲ್ (ಹುಮನಾಬಾದ್) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರದಲ್ಲಿ ದಿ 18 11 2006 ಹಾಗೂ 29 12 2006ರಂದು ಜರುಗಿದ ಸಿಂಡಿಕೇಟ್ ಸಭೆಗಳಲ್ಲಿ ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಯಾದ ಐಎಫ್‌ಎಸ್ ಅಧಿಕಾರಿ ಅವರು ಸಭೆಯನ್ನು ಬಹಿಷ್ಕರಿಸಿ ಹೊರ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹೌದಾದಲ್ಲಿ ಸರ್ಕಾರ ಯಾವ ಕ್ರಮ ಜರುಗಿಸುವುದು,

ಆ) ಮಹಿಳಾ ವಿಶ್ವವಿದ್ಯಾಲಯ ಕುಲಸಚಿವರು ಸಿಂಡಿಕೇಟ್ ಹಾಗೂ ಕುಲಪತಿಗಳ ಅನುಮತಿ ಇಲ್ಲದೆ ಸರ್ಕಾರ ಹಾಗೂ ಘನತೆವೆತ್ತ ರಾಜ್ಯಪಾಲರು ಮತ್ತು ಕುಲಾಧಿಪತಿಗಳ ಕಛೇರಿಗೆ ನೇರವಾಗಿ ಪತ್ರ ವ್ಯವಹಾರ ಮಾಡುತ್ತಿರುವ ಸಂಗತಿ ತಿಳಿದಿದೆಯೇ, ಹೌದಾದಲ್ಲಿ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು,

ಇ) ಮಹಿಳಾ ವಿಶ್ವವಿದ್ಯಾಲಯ ಕುಲ ಸಚಿವರು, ಬಿಜಾಪುರ ಇವರು ನಾನು ರಾಷ್ಟ್ರಾಧ್ಯಕ್ಷರಿಂದ ನೇಮಕಗೊಂಡವನು ನನ್ನನ್ನು ಪ್ರಶ್ನಿಸುವ ಹಕ್ಕು ನಿಮಗಿಲ್ಲ ಎಂದು ಕುಲಪತಿಗಳಿಗೆ ಹಾಗೂ ಸಿಂಡಿಕೇಟ್ ಪ್ರಾಧಿಕಾರಕ್ಕೆ ಹೇಳಿ ಸಿಂಡಿಕೇಟ್ ಸಭೆಯಲ್ಲಿ ಅವಿಧೇಯತೆಯಿಂದ ವರ್ತಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಜರುಗಿಸುವುದು?